

# ಬೆಳ್ಳಿ ವಾಚು; ಹೊಸ ಮಿಂಚು!

**ಸಮಯ ನೋಡಲು ಬಳಸುವ ವಾಚುಗಳು ಫ್ಯಾಷನ್‌ಗೂ ಸೈ ಎನಿಸಿವೆ. ಇದೀಗ ಚಿನ್ನ, ಬೆಳ್ಳಿಯಲ್ಲಿಯೂ ವೈವಿಧ್ಯಮಯ ವಾಚುಗಳು ಬಂದಿದ್ದು, ಬಹಳ ಸೊಗಸಾದ ವಿನ್ಯಾಸಗಳಲ್ಲಿ ಮಾರುಕಟ್ಟೆಯಲ್ಲಿ ಲಭ್ಯ.**

■ **ಕೃಷ್ಣವೇಣಿ ಪ್ರಸಾದ್ ಮುಳಿಯ**

ನಾವು ಸಮಯ ಪಾಲನೆ ಮಾಡಬೇಕು. ಕೈಯಲ್ಲಿ ಒಂದು ವಾಚು ಇರಬೇಕು. ಅದನ್ನು ನಮಗನುಗುಣವಾಗಿ ಬಳಸಬೇಕು. ನಮ್ಮ ಜೀವನಶೈಲಿಯ ನಿರ್ಧಾರಕ್ಕೆ ವಾಚು ಬಹಳ ಅಗತ್ಯ. ಕೈಯಲ್ಲಿ ಸರಿಯಾದ ಸಮಯ ತೋರಿಸುವ ವಾಚು ನಮ್ಮ ದಿನಚರಿಯನ್ನು ಸರಿಯಾಗಿ ನಿಭಾಯಿಸುತ್ತದೆ. ನಾವು ಮಾನಸಿಕವಾಗಿ ನಮ್ಮನ್ನು ಸರಿಯಾಗಿ ನಿಭಾಯಿಸಿಕೊಂಡು ಹೋಗುವುದು ಸಮಯ ಪಾಲನೆಯಿಂದ ಸಾಧ್ಯ.

## ವಾಚು ಹೇಗಿರಬೇಕು?

ನಮ್ಮ ಕೈಗೆ ಹಿತವಾಗಿರುವ ವಾಚು ನಮ್ಮದಾಗಿರಬೇಕು. ತುಂಬಾ ಭಾರವಾಗಿರದೆ, ಕಟ್ಟುವ ರೀತಿಯಲ್ಲಿ ಇದ್ದು ಆ ಕಡೆ ಈ ಕಡೆ ವಾಲದಂತೆ, ಡಯಲ್ ನಮಗೆ ಸರಿಯಾಗಿ ಕಾಣುವಂತೆ, ಕೈಯ ಗಾತ್ರ ಹೊಂದಿಕೊಂಡು ವಾಚು ಇರಬೇಕು. ಹೆಂಗಳೆಯರಿಗೆ, ಮಕ್ಕಳಿಗೆ, ಮಹನೀಯರಿಗೆ, ಕುವರಿಯರಿಗೆ ಅವರವರ ಭಾವಕ್ಕೆ ಹೊಂದಿಕೊಂಡು ವಾಚು ಇರಬೇಕು. ನೋಡುವವರ ಕಣ್ಣು ಸೆಳೆಯುವಂತಿರಬೇಕು. ಕೈ ಸಪೂರವಾಗಿದ್ದರೆ ಡಯಲ್ ಕಟ್ಟಿದಾಗ ಅದು ಶೋಭೆ ತರುವಂತಿರಬೇಕು. ಕೆಲವರ ಕೈ ಗುಂಡಾಗಿ, ಸಪೂರವಾಗಿ, ಚಪ್ಪಟೆಯಾಕಾರದಲ್ಲಿ, ಸಣ್ಣದಾಗಿ, ಉದ್ದವಾಗಿ ಅವರವರ ಶರೀರ ಪ್ರಕೃತಿಗೆ ಹೊಂದಿಕೊಂಡು ಇರುತ್ತದೆ. ಆ ಗಾತ್ರ ಹೊಂದಿಕೊಂಡು ವಾಚು ಹೊಂದುವಂತೆ ಧರಿಸಬೇಕು.

ಕೆಲವರಿಗೆ ದೊಡ್ಡ ಡಯಲ್ ಇಷ್ಟ. ಆಗ ಕೈಗೆ ಟೈಟ್ ಆಗಿದ್ದು, ಜೋತು ಬೀಳದ ಹಾಗೆ ನೋಡಿಕೊಳ್ಳಬೇಕು. ಸಣ್ಣ ಡಯಲ್ ಆ ಕಡೆ ಈ ಕಡೆ ಚಲಿಸಿದರೆ ಸೌಂದರ್ಯಕ್ಕೆ ಕುತ್ತು ಬರುವುದಿಲ್ಲ. ಚೈನು ಹೊಂದಿಕೊಂಡು ಡಯಲ್ ಇರಬೇಕು. ವಾಚುಪ್ರಿಯರಿಗೆ ಬೆಲ್ಟ್ ವಾಚು ಕೂಡ ಬಹಳ ಇಷ್ಟವಾಗುತ್ತದೆ. ಇಂದು ಚಿನ್ನ ಬೆಳ್ಳಿಯ

